**2023-24ನೇ ಸಾಲಿನ ವಿವಿಧ ಯೋಜನೆಗಳಿಗೆ ಅರ್ಜಿ ಆಹ್ವಾನ**
**ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ**
**ಪತ್ರಿಕಾ ಪ್ರಕಟಣೆ ದಿನಾಂಕ:17-03-2023ಕ್ಕೆ ಮಾಹಿತಿ**
**(ಪ್ರಜಾವಾಣಿ, ವಿಜಯವಾಣಿ, ಸಂಯುಕ್ತ ಕರ್ನಾಟಕ ಹಾಗೂ ಉದಯವಾಣಿ ದಿನಪತ್ರಿಕೆಗಳು)**

**2023-24ನೇ ಸಾಲಿಗೆ ಗಡಿ ಪ್ರಾಧಿಕಾರದ ವಿವಿಧ ಯೋಜನೆಗಳಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ವಿವರಗಳು ಈ ಕೆಳಕಂಡಂತಿರುತ್ತದೆ. ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ:15-04-2023. ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಹಾಗೂ ಶೈಕ್ಷಣಿಕ ಚಟುವಟಿಕೆಗಳಿಗೆ/ಯೋಜನೆಗಳಿಗಾಗಿ ಪ್ರತ್ಯೇಕ ಅರ್ಜಿ ನಮೂನೆಗಳನ್ನು ಲಗತ್ತಿಸಿದೆ)**

1) **ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಅರ್ಜಿಗಳನ್ನು ಗಡಿ ಜಿಲ್ಲೆಯ ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಕಡ್ಡಾಯವಾಗಿ ಸಲ್ಲಿಸುವುದು-ಗಡಿ ಪ್ರಾಧಿಕಾರದಲ್ಲಿ ಯಾವುದೇ ಅರ್ಜಿಯನ್ನು ನೇರವಾಗಿ ಸ್ವೀಕರಿಸುವುದಿಲ್ಲ ಹಾಗೂ ಸ್ವೀಕೃತಿ ನೀಡುವುದಿಲ್ಲ**

2023-24ನೇ ಸಾಲಿಗೆ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದಿಂದ 63 ಗಡಿ ತಾಲ್ಲೂಕುಗಳಲ್ಲಿ ಹಾಗೂ ಹೊರನಾಡಿನಲ್ಲಿ ಕಾರ್ಯಕ್ರಮ ಆಯೋಜಿಸಲು ನೋಂದಾಯಿತ ಅರ್ಹ ಸಂಘ/ಸಂಸ್ಥೆಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ/ವಿಚಾರ ಸಂಕಿರಣ/ಚಿಂತನಾ ಶಿಬಿರ/ಗಡಿ ಉತ್ಸವ ಹಾಗೂ ಹೊರನಾಡು ಗಡಿ ಉತ್ಸವ/ಮಹಿಳಾ ಸಂಘ/ಸಂಸ್ಥೆಗಳು ನಡೆಸುವ ಗಡಿ ಉತ್ಸವ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲು ಹಾಗೂ ಕಲಾವಿದರನ್ನು ಪ್ರಾಯೋಜಿಸಲು ಮಾತ್ರ ಅರ್ಜಿಗಳನ್ನು ಅಹ್ವಾನಿಸಲಾಗಿದೆ.

ರಾಜ್ಯದ ನೊಂದಾಯಿತ ಅರ್ಹ ಸಂಘ/ಸಂಸ್ಥೆಗಳು ಪ್ರಾಧಿಕಾರದ ಅಂತರ್ಜಾಲದಲ್ಲಿ ಲಭ್ಯವಿರುವ ಅರ್ಜಿ ನಮೂನೆಯಲ್ಲಿಯೇ ಅರ್ಜಿಗಳನ್ನು ಕಡ್ಡಾಯವಾಗಿ ಸಂಬಂಧಪಟ್ಟ 19 ಗಡಿ ಜಿಲ್ಲೆಗಳ ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಕಚೇರಿಗೆ ಈ ಕೆಳಕಂಡ ದಾಖಲೆಗಳೊಂದಿಗೆ ಅರ್ಜಿಗಳನ್ನು ಸಲ್ಲಿಸುವುದು. ಸದರಿ ಅರ್ಜಿಗಳನ್ನು ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರು ಪರಿಶೀಲಿಸಿ ಗಡಿ ಪ್ರಾಧಿಕಾರಕ್ಕೆ ಕಡ್ಡಾಯವಾಗಿ ಟಪಾಲು ಮುಖಾಂತರವೇ ರವಾನಿಸುವುದು. **ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ <u>ಅರ್ಜಿ ಸಲ್ಲಿಸುವ ಸಂಸ್ಥೆಗಳು ನೇರವಾಗಿ ಗಡಿ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸುವಂತಿಲ್ಲ. ಕಳೆದ ವರ್ಷಗಳಲ್ಲಿ ಗಡಿ ಪ್ರಾಧಿಕಾರದಿಂದ ಅನುದಾನ ಪಡೆದವರು ಹಾಗೂ ಕಳೆದ ವರ್ಷಗಳಲ್ಲಿ ಅನುದಾನ ಪಡೆದು ಈ ಕಛೇರಿಗೆ ಜಿಲ್ಲಾಧಿಕಾರಿಗಳ ಮೂಲಕ ಹಣಬಳಕೆ ಪ್ರಮಾಣ ಪತ್ರ ಸಲ್ಲಿಸದೇ ಇರುವವರು ಪ್ರಸಕ್ತ ಸಾಲಿಗೆ ಅರ್ಜಿ ಸಲ್ಲಿಸುವಂತಿಲ್ಲ. ಹಾಗೂ ಹೊರರಾಜ್ಯದ ಸಂಘ/ಸಂಸ್ಥೆಗಳು ನೇರವಾಗಿ ಗಡಿ ಪ್ರಾಧಿಕಾರಕ್ಕೆ ಅರ್ಜಿಗಳನ್ನು ಸಲ್ಲಿಸಬಹುದು.</u>**

**ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಸಲ್ಲಿಸಬೇಕಾದ ಅಗತ್ಯ ದಾಖಲೆಗಳು:ಗೆಜೆಟೆಡ್ ಅಧಿಕಾರಿಯಿಂದ ದೃಡೀಕರಿಸಬೇಕು.**

1. ನಿಗದಿತ ನಮೂನೆಯಲ್ಲಿ ಸಂಸ್ಥೆಯ ಅರ್ಜಿ,
2. ಬೈಲಾ-ಕನ್ನಡ ಸಾಂಸ್ಕೃತಿಕ ಕಾರ್ಯಕ್ರಮ/ಉತ್ಸವ ನಡೆಸಲು ಅವಕಾಶವಿರಬೇಕು.
3. ನೊಂದಾಣಿ, ನವೀಕರಣ ಪ್ರತಿ, ಅಂದಾಜು ಪಟ್ಟಿ
4. ಕಳೆದ ಮೂರು ವರ್ಷಗಳ ಆಡಿಟ್ ವರದಿ/ಹಿಂದಿನ ವರ್ಷಗಳ ಆಡಿಟ್ ವರದಿ
5. ಹಿಂದಿನ ವರ್ಷಗಳಲ್ಲಿ ಕಾರ್ಯಕ್ರಮ ನಡೆಸಿರುವ ಬಗ್ಗೆ ದಾಖಲೆಗಳು,(ದೃಡೀಕರಿಸಬೇಕು)
6. ಸಂಸ್ಥೆಯ ಎಲ್ಲಾ ಸದಸ್ಯರ ದೃಡೀಕರಿಸಿದ ಆಧಾರ್ ಗುರುತಿನ ಚೀಟಿ, ದೂರವಾಣಿ ಸಂಖ್ಯೆಯೊಂದಿಗೆ.
7. ಹೊರರಾಜ್ಯದ ಸಂಸ್ಥೆಗಳು ಸಲ್ಲಿಸುವ ದಾಖಲಾತಿಗಳನ್ನು ಅನ್ಯಭಾಷೆಯಿಂದ ಭಾಷಾಂತರಿಸಿ ಕನ್ನಡ/ಆಂಗ್ಲ ಭಾಷೆಯಲ್ಲಿ ದೃಡೀಕರಿಸಿ ನೀಡಿವುದು.
8. ಎಲ್ಲಾ ದಾಖಲೆಗಳ ಪ್ರತಿಗಳನ್ನು ಗೆಜೆಟೆಡ್ ಅಧಿಕಾರಿಗಳಿಂದ ದೃಡೀಕರಿಸಬೇಕು.
9. ಎರಡರಿಂದ ಮೂರು ಸಂಸ್ಥೆಗಳಲ್ಲಿ ಒಂದೇ ವ್ಯಕ್ತಿಯು ಸದಸ್ಯ/ಅಧ್ಯಕ್ಷರಿದ್ದಲ್ಲಿ ಅರ್ಜಿಯನ್ನು ಪರಿಗಣಿಸುವುದಿಲ್ಲ.

2) **ಶೈಕ್ಷಣಿಕ ಚಟುವಟಿಕೆಗಳಿಗೆ/ಯೋಜನೆಗಳಿಗೆ ಸಲ್ಲಿಸಬೇಕಾದ ಅಗತ್ಯ ದಾಖಲೆಗಳು: (ನೇರವಾಗಿ ಗಡಿ ಪ್ರಾಧಿಕಾರಕ್ಕೆ-ಅಗತ್ಯ ದೃಡೀಕೃತ ದಾಖಲೆಗಳೊಂದಿಗೆ)**

19 ಗಡಿ ಜಿಲ್ಲೆಯ 63 ಗಡಿ ತಾಲ್ಲೂಕುಗಳ ಹಾಗೂ ಹೊರರಾಜ್ಯದ ಗಡಿ ಕನ್ನಡ ಪ್ರದೇಶದಲ್ಲಿ ಕನ್ನಡ ಮಾಧ್ಯಮದ ಮೂಲಕ ಶಿಕ್ಷಣ ನೀಡುತ್ತಿರುವ ಕನ್ನಡ ಶಾಲೆಗಳಿಗೆ/ಸಂಘ ಸಂಸ್ಥೆಗಳಿಗೆ ಶಾಲಾ ಕೊಠಡಿ/ಸಾಂಸ್ಕೃತಿಕ ಭವನ /ರಂಗಮಂದಿರ/ಗ್ರಂಥಾಲಯ/ಆವರಣ ಗೋಡೆ/ಶುದ್ಧ ಕುಡಿಯುವ ನೀರಿನ ಘಟಕ/ಪಿಠೋಪಕರಣ ಪಾಠೋಪಕರಣ/ಸ್ಮಾರ್ಟ್ ಕ್ಲಾಸ್/ಗಡಿ ಭಾಗದ ದಾರ್ಶನಿಕರ ಸ್ಮಾರಕ ಅಭಿವೃದ್ಧಿ/ಗಡಿಭಾಗಗಳಲ್ಲಿ ಸ್ವಾಗತ ಕಮಾನು ಇತ್ಯಾದಿ ಯೋಜನೆಗಳಿಗೆ ನೇರವಾಗಿ ಗಡಿ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಬಹುದು.

1. ಸಂಸ್ಥೆಯ ಅರ್ಜಿ ಸಹಿಯೊಂದಿಗೆ, ಸ್ಪಷ್ಟ ವಿಳಾಸ, ಉದ್ದೇಶ, ಅನುದಾನ ಬೇಡಿರುವ ಮೊತ್ತ, ಸಂಸ್ಥೆಯು ಭರಿಸುವ ವೆಚ್ಚ ಇತ್ಯಾದಿ
2. ವಿದ್ಯಾರ್ಥಿಗಳ ಸಂಖ್ಯೆ, ಶಿಕ್ಷಕರ ಸಂಖ್ಯೆ, ಈಗಿರುವ ಮೂಲಭೂತ ಸೌಕರ್ಯಗಳ ಬಗ್ಗೆ ಮಾಹಿತಿ, ಶಾಲೆಯ ಭಾವಚಿತ್ರ (ಎಲ್ಲಾ ಕೋನದಲ್ಲಿ ತೆಗೆದ 3 ಫೋಟೊ) ಶಾಲೆಯ/ಸಂಸ್ಥೆಯ ಹೆಸರಿನಲ್ಲಿ ಇರುವ ಖಾಲಿ ನಿವೇಶನದ ಭಾವಚಿತ್ರ ಜಿ.ಪಿ.ಎಸ್. ಮಾಹಿತಿಯೊಂದಿಗೆ
3. ಸರ್ಕಾರಿ ಶಾಲೆಯಾಗಿದ್ದಲ್ಲಿ, BEO ರವರ ಶಿಫಾರಸ್ಸಿನೊಂದಿಗೆ ಅರ್ಜಿ ಸಲ್ಲಿಸತಕ್ಕದ್ದು.
4. ಹೊರರಾಜ್ಯದ ಗಡಿಭಾಗಕ್ಕೆ ಇರುವ ದೂರ ಎಷ್ಟು ಎನ್ನುವ ಬಗ್ಗೆ ದಾಖಲೆ
5. ಪ್ರಸ್ತುತ ವರ್ಷದ ಅಂದಾಜು ಪತ್ರಿಕೆ ಮತ್ತು ನೀಲನಕ್ಷೆ(ಜಿ.ಪಿ.ಎಸ್‌ನೊಂದಿಗೆ) ಸಕ್ಷಮ ಸರ್ಕಾರಿ ಇಂಜಿನಿಯರು ದೃಢೀಕರಿಸಬೇಕು(ಎ.ಇ.ಇ ಅಥವಾ ಹೆಚ್ಚಿನ ದರ್ಜೆಯ ಅಧಿಕಾರಿಗಳು)
6. ಶಾಲೆಯ/ಸಂಸ್ಥೆಯ ನೊಂದಾಯಿತ ದಾಖಲೆ, ನವೀಕರಣ ಪತ್ರ, ಸಂಸ್ಥೆಯ ಬೈಲಾ, ಕನ್ನಡ ಮಾಧ್ಯಮ ಪ್ರಮಾಣ ಪತ್ರ, (ಸಕ್ಷಮ ಪ್ರಾಧಿಕಾರದಿಂದ ಶಿಕ್ಷಣ/ಸಹಕಾರ ಇಲಾಖೆಯಿಂದ ಪಡೆದ ದಾಖಲೆಗಳು)
7. ಶಾಲೆಯ/ಸಂಸ್ಥೆಯ ಹೆಸರಿನಲ್ಲಿ ಇರುವ ನಿವೇಶನದ ಮೂಲ ದಾಖಲೆ, ಸಂಬಂಧಪಟ್ಟ ಪಂಚಾಯ್ತಿ/ಸ್ಥಳೀಯ ಸಂಸ್ಥೆಯ ನೀಡಿದ ನಿವೇಶನದ ದಾಖಲೆ(ಆರ್.ಟಿ.ಸಿ/ಉತಾರೆ) ಹಾಗೂ ಕಟ್ಟಡ ಕಟ್ಟಲು ಅನುಮತಿ ಪಡೆಯುವ ನಿರಾಕ್ಷೇಪಣಾ ಪತ್ರ
8. ಕಳೆದ ಮೂರು ವರ್ಷಗಳ ಆಡಿಟ್ ವರದಿ, ಸಂಸ್ಥೆಯ ಎಲ್ಲಾ ಸದಸ್ಯರ ದೃಢೀಕರಿಸಿದ ಆಧಾರ್ ಗುರುತಿನ ಚೀಟಿ, ದೂರವಾಣಿ ಸಂಖ್ಯೆಯೊಂದಿಗೆ
9. ಸರ್ಕಾರದ ಬೇರೆ ಇಲಾಖೆಯಿಂದ ಇದೇ ಉದ್ದೇಶಕ್ಕೆ ಅನುದಾನ ಪಡೆದಿಲ್ಲವೆಂಬ ದೃಢೀಕರಣ ಪತ್ರ
10. ಹೊರರಾಜ್ಯದ ಸಂಸ್ಥೆಗಳು ಸಲ್ಲಿಸುವ ದಾಖಲಾತಿಗಳನ್ನು ಅನ್ಯಭಾಷೆಯಿಂದ ಭಾಷಾಂತರಿಸಿ ಕನ್ನಡ/ಆಂಗ್ಲ ಭಾಷೆಯಲ್ಲಿ ದೃಢೀಕರಿಸಿ ನೀಡುವುದು.
11. ಎಲ್ಲಾ ದಾಖಲೆಗಳ ಪ್ರತಿಗಳನ್ನು ಗೆಜೆಟೆಡ್ ಅಧಿಕಾರಿಗಳಿಂದ ದೃಢೀಕರಿಸಬೇಕು/ ಮೇಲ್ಕಂಡ ದಾಖಲೆಗಳು ಇಲ್ಲದಿದ್ದಲ್ಲಿ ಯಾವುದೇ ಹಿಂಬರಹ ಇಲ್ಲದೇ ಅರ್ಜಿ ವಿಲೇ ಮಾಡಲಾಗುವುದು.
12. ಅರ್ಜಿ ಸಲ್ಲಿಸಿದ ತಕ್ಷಣ ಅನುದಾನಕ್ಕೆ ಅರ್ಹರಾಗಿರುವುದಿಲ್ಲ.
13. ಸ್ಥಳೀಯ ಅಗತ್ಯತೆ ಅನ್ಯ ಭಾಷಾ ಪ್ರಭಾವ ಗಡಿಗೆ ಹೊಂದಿಕೊಂಡ ಶಾಲೆಗಳಿಗೆ ಆದ್ಯತೆ ನೀಡಲಾಗುವುದು.

## 2023-24ನೇ ಸಾಲಿಗೆ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಯೋಜನೆಗಳಿಗೆ ಅಂಚೆ ಮೂಲಕ ಅಥವಾ ಖುದ್ದಾಗಿ ನಿಗದಿತ ನಮೂನೆಯಲ್ಲಿ ಅರ್ಜಿಗಳನ್ನು ಸಲ್ಲಿಸಬೇಕಾದ ವಿಳಾಸ

| **ಕ್ರ.ಸಂ. (1)ರಂತೆ ರಾಜ್ಯದ ಗಡಿನಾಡಿನಲ್ಲಿ ಸಾಂಸ್ಕೃತಿಕ ಉತ್ಸವ ನಡೆಸಲು ರಾಜ್ಯದ ಸಂಘ/ಸಂಸ್ಥೆಗಳು ಅರ್ಜಿ ಸಲ್ಲಿಸಬೇಕಾದ ಕಛೇರಿ ವಿಳಾಸ** | **ಕ್ರ.ಸಂ. (2)ರಂತೆ ಗಡಿ ಭಾಗಗಳಲ್ಲಿ ಸಾಂಸ್ಕೃತಿಕ ಉತ್ಸವ ನಡೆಸಲು ಹೊರರಾಜ್ಯದ/ಹೊರನಾಡಿನ ಸಂಘ/ಸಂಸ್ಥೆಗಳು ಹಾಗೂ ಶೈಕ್ಷಣಿಕ ಯೋಜನೆಗಳಿಗೆ ಅರ್ಜಿ ಸಲ್ಲಿಸಬೇಕಾದ ವಿಳಾಸ** |
|---|---|
| **ಸಹಾಯಕ ನಿರ್ದೇಶಕರು,**<br>ಕನ್ನಡ ಮತ್ತು ಸಂಸ್ಕೃತಿ ಇಲಾಖೆ<br>------------- ಗಡಿ ಜಿಲ್ಲೆ<br>**(ನೇರವಾಗಿ ಗಡಿ ಪ್ರಾಧಿಕಾರದಲ್ಲಿ ಅರ್ಜಿ ಸ್ವೀಕರಿಸುವುದಿಲ್ಲ)** | **ಕಾರ್ಯದರ್ಶಿಗಳು,**<br>ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ<br>ಎಫ್.ಕೆ.ಸಿ.ಸಿ.ಐ. ಕಟ್ಟಡ, ಫೆಡರೇಶನ್ ಹೌಸ್, 3ನೇ ಮಹಡಿ,<br>ಕೆ.ಜಿ.ರೋಡ್, ಬೆಂಗಳೂರು-560009. |

### ಗಡಿ ತಾಲ್ಲೂಕು/ಹೊರರಾಜ್ಯಗಳ ಪಟ್ಟಿ

| ಕ್ರ. ಸಂ | ಗಡಿ ಜಿಲ್ಲೆಯ ಹೆಸರು | ಗಡಿ ತಾಲ್ಲೂಕುಗಳ ಹೆಸರು | ಕ್ರ. ಸಂ | ಗಡಿ ಜಿಲ್ಲೆಯ ಹೆಸರು | ಗಡಿ ತಾಲ್ಲೂಕುಗಳ ಹೆಸರು |
|---|---|---|---|---|---|
| 1 | ಬೆಂಗಳೂರು ನಗರ | 1)ಆನೇಕಲ್ | 7 | ತುಮಕೂರು | 16)ಮಧುಗಿರಿ<br>17)ಪಾವಗಡ<br>18)ಸಿರಾ |
| 2 | ಬೆಂಗಳೂರು ಗ್ರಾಮಾಂತರ | 2)ಹೊಸಕೋಟೆ | 8 | ದಕ್ಷಿಣ ಕನ್ನಡ | 19)ಬಂಟ್ವಾಳ<br>20)ಮಂಗಳೂರು<br>21)ಪುತ್ತೂರು<br>22)ಸುಳ್ಯ |
| 3 | ರಾಮನಗರ | 3)ಕನಕಪುರ | 9 | ಕೊಡಗು | 23)ಮಡಿಕೇರಿ<br>24)ವಿರಾಜಪೇಟೆ |
| 4 | ಚಿತ್ರದುರ್ಗ | 4)ಚಳ್ಳಕೆರೆ<br>5)ಹಿರಿಯೂರು<br>6)ಮೊಳಕಾಲ್ಮೂರು | 10 | ಚಾಮರಾಜನಗರ | 25)ಚಾಮರಾಜನಗರ<br>26)ಗುಂಡ್ಲುಪೇಟೆ<br>27)ಕೊಳ್ಳೇಗಾಲ<br>28)ಹನೂರು |
| 5 | ಚಿಕ್ಕಬಳ್ಳಾಪುರ | 7)ಬಾಗೇಪಲ್ಲಿ<br>8)ಚಿಂತಾಮಣಿ<br>9)ಗೌರಿಬಿದನೂರು<br>10)ಗುಡಿಬಂಡೆ | 11 | ಮೈಸೂರು | 29)ಹೆಗ್ಗಡದೇವನಕೋಟೆ<br>30)ಸರಗೂರು |
| 6 | ಕೋಲಾರ | 11)ಮಾಲೂರು<br>12)ಮುಳಬಾಗಿಲು<br>13)ಶ್ರೀನಿವಾಸಪುರ<br>14)ಬಂಗಾರುಪೇಟೆ<br>15) ಕೆ.ಜಿ.ಎಫ್ | 12 | ವಿಜಯಪುರ | 31)ವಿಜಯಪುರ<br>32)ಇಂಡಿ<br>33)ತಿಕೋಟಾ<br>34)ಚಡಚಣ |

| ಕ್ರ. ಸಂ | ಗಡಿ ಜಿಲ್ಲೆಯ ಹೆಸರು | ಗಡಿ ತಾಲ್ಲೂಕುಗಳ ಹೆಸರು | ಕ್ರ. ಸಂ | ಗಡಿ ಜಿಲ್ಲೆಯ ಹೆಸರು | ಗಡಿ ತಾಲ್ಲೂಕುಗಳ ಹೆಸರು |
|---|---|---|---|---|---|
| 13 | ಬಳ್ಳಾರಿ | 35)ಬಳ್ಳಾರಿ<br>36)ಸಂಡೂರು<br>37)ಸಿರಗುಪ್ಪ | 17 | ಉತ್ತರ ಕನ್ನಡ | 50)ಕಾರವಾರ<br>51)ಜೋಯಿಡಾ |
| 14 | ಯಾದಗಿರಿ | 38)ಶಹಪುರ<br>39)ಯಾದಗಿರಿ<br>40)ವಡಗೇರಾ<br>41)ಗುರುಮಿಠ್ಕಲ್ | 18 | ಕಲಬುರ್ಗಿ | 52)ಚಿಂಚೋಳಿ<br>53) ಅಫಜನಪುರ<br>54) ಆಳಂದ<br>55) ಸೇಡಂ |
| 15 | ರಾಯಚೂರು | 42)ಮಾನ್ವಿ<br>43)ರಾಯಚೂರು | 19 | ಬೀದರ | 56) ಬಸವಕಲ್ಯಾಣ<br>57) ಭಾಲ್ಕಿ<br>58) ಬೀದರ<br>59) ಹುಮ್ನಾಬಾದ್<br>60) ಜೌರಾದ್<br>61) ಚಿಟಗುಪ್ಪ<br>62)ಹುಲಸೂರು<br>63) ಕಮಲಾನಗರ |
| 16 | ಬೆಳಗಾವಿ | 44)ಬೆಳಗಾವಿ<br>45)ಅಥಣಿ<br>46)ಹುಕ್ಕೇರಿ<br>47)ಚಿಕ್ಕೋಡಿ<br>48)ಖಾನಾಪುರ<br>49)ನಿಪ್ಪಾಣಿ | | ಹೊರರಾಜ್ಯಗಳು | 1. ಕೇರಳ<br>2. ಮಹಾರಾಷ್ಟ್ರ<br>3. ಆಂಧ್ರಪ್ರದೇಶ<br>4. ತೆಲಂಗಾಣ<br>5. ಗೋವಾ<br>6. ತಮಿಳುನಾಡು<br>ಹಾಗೂ ಇತರೆ ಕನ್ನಡ ಪ್ರದೇಶಗಳು |

ಅರ್ಹ ಸಂಘ/ಸಂಸ್ಥೆಗಳು ಕನ್ನಡಪರ ಚಟುವಟಿಕೆಗಳಿಗೆ ಅನುದಾನ ನೀಡಲು ಆಯಾ ಚಟುವಟಿಕೆಗಳಿಗೆ ತಕ್ಕಂತೆ ಸೂಕ್ತ ವಿವರಗಳೊಂದಿಗೆ ಗೆಜೆಟೆಡ್ ಅಧಿಕಾರಿಯಿಂದ ದೃಢೀಕರಿಸಿದ ಎಲ್ಲಾ ದಾಖಲೆಗಳನ್ನು ಲಗತ್ತಿಸಿ, ಅಂತರ್ಜಾಲದಲ್ಲಿ ನೀಡಲಾದ ನಿಗದಿತ ಅರ್ಜಿ ನಮೂನೆಯನ್ನು ಡೌನ್‌ಲೋಡ್ ಮಾಡಿ ಎಲ್ಲಾ ಕಾಲಂಗಳನ್ನು ಭರ್ತಿ ಮಾಡಿ ಮೇಲ್ಕಂಡ ವಿಳಾಸಕ್ಕೆ ಖುದ್ದಾಗಿ/ಅಥವಾ ಪೋಸ್ಟ್ ಮೂಲಕ ಸಲ್ಲಿಸುವುದು ಹಾಗೂ ಅಪೂರ್ಣ ಅರ್ಜಿಗಳನ್ನು ಯಾವುದೇ ಹಿಂಬರಹ ನೀಡದೇ ತಿರಸ್ಕರಿಸಲಾಗುವುದು.

ಸಹಿ/-

**ಕಾರ್ಯದರ್ಶಿ**
**ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ**